## ಟ್ರಾನ್ಸ್‌ಫಾರ್ಮರ್‌ಗಳನ್ನು ವೈಂಡಿಂಗ್ ಮಾಡುವುದರಿಂದ ಮಕ್ಕಳ ಬದುಕನ್ನು ಪರಿವರ್ತಿಸುವವರೆಗೆ

**ಪರಮೇಶ್ವರಯ್ಯ ಹಿರೇಮಠ್**

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಯಾಳಗಿ, ಸುರಪುರ ತಾಲ್ಲೂಕು
ಯಾದಗಿರಿ ಜಿಲ್ಲೆ, ಕರ್ನಾಟಕ

ನಲವತ್ತೆಂಟು ವರ್ಷದ ಪರಮೇಶ್ವರಯ್ಯ ಹಿರೇಮಠ ಮಿತಭಾಷಿ. ಶಾಂತ, ಗಂಭೀರ ವ್ಯಕ್ತಿತ್ವದ ಹಿರೇಮಠರಿಗೆ ಅನಾವಶ್ಯಕ ಹರಟೆಗೆ ಮನಸ್ಸು ಒಪ್ಪುವುದಿಲ್ಲ; ಸಮಯವೂ ಇಲ್ಲ. ತರಗತಿಯಲ್ಲಿ ಮಕ್ಕಳೊಂದಿಗೆ ಕಾಲ ಕಳೆಯುವುದರಲ್ಲೇ ಅವರಿಗೆ ಆಸಕ್ತಿ. ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತಿರುವಾಗ ಅವರನ್ನು ಗಮನಿಸುವುದೇ ಒಂದು ಖುಷಿಯ ವಿಷಯವಾದರೆ, ಶಾಲೆಯ ಬಗ್ಗೆ, ತಮ್ಮ ಕೆಲಸದ ಬಗ್ಗೆ ಒಂದೆರಡು ತಾಸು

ಅವರನ್ನು ಮಾತಿಗೆಳೆಯುವುದು ಅತ್ಯಂತ ಆಸಕ್ತಿದಾಯಕ.

ಪರಮೇಶ್ವರಯ್ಯನವರು ಪ್ರಾರಂಭದಲ್ಲಿ ನವೋದಯ ಶಾಲೆಯೊಂದರಲ್ಲಿ ಗ್ರಂಥಪಾಲಕನಾಗಿ ಕೆಲಸಕ್ಕೆ ಸೇರಿದರು, ಅನಂತರ ಎಲೆಕ್ಟ್ರಿಶಿಯನ್ ಆಗಿ ಕೆಲಸ ಮಾಡಿದರು. ಟ್ರಾನ್ಸ್‌ಫಾರ್ಮರ್‌ಗಳನ್ನು ವೈಂಡಿಂಗ್ ಮಾಡುತ್ತ ಮೂರು ವರ್ಷ ಕಳೆದರು. 1999ರಲ್ಲಿ ಮೂವತ್ತರ ಪ್ರಾಯದಲ್ಲಿ ಒಂದು ಪದವಿಯನ್ನೂ ಇಂಟರ್ನ್‌ಶಿಪ್ ಟೀಚರ್ ಕೋರ್ಸ್ (ಐಟಿಸಿ)ಅನ್ನೂ ಮುಗಿಸಿ ಶಿಕ್ಷಣ ಇಲಾಖೆಯ ಕೆಲಸಕ್ಕೆ ಸೇರಿದರು. ಮೊದಲು ಕೆಲಸ ಮಾಡಿದ್ದು ಸುರಪುರ ತಾಲ್ಲೂಕಿನ ದಾದಲಾಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ. ಹಿಂದಿನ ರಾಜ್ಯ ಸರ್ಕಾರ ನೀಡಿದ್ದ ಗ್ರಾಮೀಣ ಮೀಸಲಾತಿಯ ಕೃಪಾಂಕಗಳು ಊರ್ಜಿತವಲ್ಲ ಎಂದು 2003ರಲ್ಲಿ ನ್ಯಾಯಾಲಯ ತೀರ್ಮಾನಿಸಿದ್ದರಿಂದ, ಈ ಆಧಾರದಲ್ಲಿ ನೇಮಕಾತಿಯಾಗಿದ್ದ ಪರಮೇಶ್ವರಯ್ಯನವರು ಉದ್ಯೋಗ ಕಳೆದುಕೊಂಡರು. ಇದೇ ಸಂಕಷ್ಟಕ್ಕೆ ಸಿಲುಕಿದ ಅನೇಕ ಶಿಕ್ಷಕರು, ಸರ್ಕಾರಿ ಆಜ್ಞೆಯನ್ನು ಅನೂರ್ಜಿತಗೊಳಿಸಿದ್ದರ ವಿರುದ್ಧ ಹೈಕೋರ್ಟಿಗೆ ಮೇಲ್ಮನವಿ ಸಲ್ಲಿಸಿದರು. ಹೈಕೋರ್ಟು ಇವರ ಪರವಾಗಿಯೇ ತೀರ್ಪು ನೀಡಿತು. ಇದರಿಂದಾಗಿ 2003ರಲ್ಲಿ ಪರಮೇಶ್ವರಯ್ಯನವರು ಯಕ್ತಾಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ನೇಮಕಗೊಂಡರು. ಕೇವಲ ಒಂದೇ ವರ್ಷದಲ್ಲಿ ಇವರ ಸಾಮರ್ಥ್ಯಗಳನ್ನು ಗುರುತಿಸಿದ ಇಲಾಖೆ ಸಮನ್ವಯ ಶಿಕ್ಷಣದ ಸಂಪನ್ಮೂಲ ಶಿಕ್ಷಕ (ಇಂಟಿಗ್ರೇಟೆಡ್ ಎಜುಕೇಶನ್ ರಿಸೋರ್ಸ್ ಟೀಚರ್ – ಐಇಆರ್‌ಟಿ) ಆಗಿ ನೇಮಿಸಿತು. ಆ ಸ್ಥಾನದಲ್ಲಿ ಅವರು 2005ರಿಂದ 2013ರವರೆಗೆ ಕೆಲಸ ಮಾಡಿದರು.

ಹೀಗೆ ಐಇಆರ್‌ಟಿ ಆಗಿ ದೀರ್ಘ ಕಾಲ ಸೇವೆ ಸಲ್ಲಿಸಿದ ಮೇಲೆ ಪರಮೇಶ್ವರಯ್ಯನವರನ್ನು ಯಾಳಗಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನೇಮಿಸಲಾಯಿತು. 1950ರ ದಶಕದ ಮಧ್ಯಭಾಗದಲ್ಲಿ ಸ್ಥಾಪಿತವಾದ ಈ ಹಳೆಯ ದೊಡ್ಡ ಶಾಲೆಯಲ್ಲಿ 1 ರಿಂದ 7ರ ವರೆಗಿನ ತರಗತಿಗಳಲ್ಲಿ ಆರುನೂರ ಎಪ್ಪತ್ತು ವಿದ್ಯಾರ್ಥಿಗಳಿದ್ದಾರೆ. ಇಲ್ಲಿ ಹನ್ನೊಂದು ಶಿಕ್ಷಕರಿದ್ದಾರೆ (ಮಂಜೂರಾಗಿರುವುದು ಹದಿನೈದು).

ಪರಮೇಶ್ವರಯ್ಯ ನಾಲ್ಕನೆಯ ತರಗತಿಗೆ ಪಾಠ ಮಾಡುತ್ತಾರೆ. ಅವರ ತರಗತಿಯಲ್ಲಿ ದಾಖಲಾಗಿರುವ ತೊಂಬತ್ತು ಮಕ್ಕಳಲ್ಲಿ ಹಾಜರಾಗುವವರು ಅರವತ್ತು ಮಂದಿ ಮಾತ್ರ. ಹಾಜರಾಗದ ಮೂವತ್ತು ಮಂದಿಯನ್ನು ಪೋಷಕರು ಪ್ರೈವೇಟ್ ಕೋಚಿಂಗ್‌ಗೆ ಹಾಕಿದ್ದಾರೆ. ಸರ್ಕಾರಿ ಶಾಲೆಯಲ್ಲಿ ಮಕ್ಕಳು ದಾಖಲಾಗಿದ್ದರೂ ಖಾಸಗಿ ಶಾಲೆಗೆ ಹೋಗುವ ವಿಚಿತ್ರ ಪರಿಪಾಠಕ್ಕೆ ಈ ಕಡೆ ಪ್ರೈವೇಟ್ ಕೋಚಿಂಗ್ ಎನ್ನುತ್ತಾರೆ. ಇದರಿಂದ ಪರಮೇಶ್ವರಯ್ಯನವರೇನೂ ಬೇಸರ ಪಡುವುದಿಲ್ಲ. ಅವರು 2013ರಲ್ಲಿ ಈ ಶಾಲೆಗೆ ಬಂದಾಗ ತರಗತಿಗೆ ನಿಯಮಿತವಾಗಿ ಬರುತ್ತಿದ್ದವರು ಹದಿನೈದು ಮಂದಿ. ತಮ್ಮ ಅಧ್ಯಾಪನದ ಶಕ್ತಿಯೇನು ಎಂಬುದನ್ನು ಪರಮೇಶ್ವರಯ್ಯ ಒಂದೇ ವರ್ಷದಲ್ಲಿ ಸಾಬೀತುಪಡಿಸಿದರು. ಇದನ್ನು ಗಮನಿಸಿ ಅನೇಕ ಪೋಷಕರು ತಮ್ಮ ಮಕ್ಕಳನ್ನು 'ಪ್ರೈವೇಟ್ ಕೋಚಿಂಗ್'ನಿಂದ ಬಿಡಿಸಿ ಪರಮೇಶ್ವರಯ್ಯನವರ ತರಗತಿಗೆ ಸೇರಿಸಿದರು.

ಯಾಳಗಿ ಗ್ರಾಮದಲ್ಲಿ ಶ್ರೀಮಂತ ಸಮುದಾಯಗಳ ನಡುವೆ ಒಳಜಗಳ, ಹಿಂಸಾಕಾಂಡ ನಡೆಯುತ್ತಲೇ ಇರುತ್ತದೆ. ಇದರಿಂದಾಗಿ ಅನೇಕ ಪೋಷಕರಿಗೆ ಶಾಲೆಗೆ ಬಂದು ತಮ್ಮ ಮಕ್ಕಳು ಹೇಗೆ ಕಲಿಯುತ್ತಿದ್ದಾರೆ ಎಂದು ವಿಚಾರಿಸಲು ಕೂಡಾ ಧೈರ್ಯವಿಲ್ಲ. ಶಿಕ್ಷಕರು ತಮ್ಮ ಸಮುದಾಯದ ಶ್ರೀಮಂತ ಮುಖಂಡರಿಗೆ ದೂರು ಹೇಳಬಹುದು ಎಂಬ ಭಯ ಅವರನ್ನು ಕಾಡುತ್ತಿರುತ್ತದೆ. ಇದನ್ನು ಗಮನಿಸಿದ ಪರಮೇಶ್ವರಯ್ಯನವರು, ವಿದ್ಯಾರ್ಥಿಗಳೇ ಮನೆಯಲ್ಲಿ ಶಾಲೆಯ ಬಗ್ಗೆ ಪೋಷಕರೊಂದಿಗೆ ಮಾತನಾಡುವಂತೆ ಉತ್ತೇಜಿಸುತ್ತಾರೆ. ಹೀಗೆ ಪೋಷಕರು ಪರೋಕ್ಷವಾಗಿ ತಮ್ಮ ಮಕ್ಕಳು ಶಾಲೆಯಲ್ಲಿ ಏನು ಕಲಿಯುತ್ತಿದ್ದಾರೆ ಎಂಬುದನ್ನೂ ಪರಮೇಶ್ವರಯ್ಯನವರ ತರಗತಿಗಳನ್ನು ಮಕ್ಕಳು ಎಷ್ಟು ಇಷ್ಟಪಡುತ್ತಾರೆ ಎಂಬುದನ್ನೂ ತಿಳಿದುಕೊಳ್ಳುತ್ತಾರೆ. ಬಹುತೇಕ ಪೋಷಕರು ಅನಕ್ಷರಸ್ಥರು. ಅವರಲ್ಲಿ ಶೇಕಡಾ 60 ಮಂದಿ ಶಾಲೆಯು ಕಳಿಸುವ ಅಂಕಪಟ್ಟಿಯ ಮೇಲೆ ಹೆಬ್ಬೆಟ್ಟು ಒತ್ತಬಲ್ಲರು, ಅಷ್ಟೇ!

ಪರಮೇಶ್ವರಯ್ಯನವರು ಅತ್ಯುತ್ತಮ ಬೋಧನಾ ಕ್ರಮವನ್ನೂ ತರಗತಿ ವಿಧಿ ವಿಧಾನಗಳನ್ನೂ ಅನುಸರಿಸುವ ಶ್ರೇಷ್ಠ ಅಧ್ಯಾಪಕ ಎಂಬ ಕೀರ್ತಿಯನ್ನು ಯಾಳಗಿಗೆ ಬರುವಾಗಲೇ ಹೊಂದಿದ್ದರು. ಮುಖ್ಯೋಪಾಧ್ಯಾಯರು ಇವರ ಕೆಲಸದಲ್ಲಿ ತಲೆ ಹಾಕುವುದಿಲ್ಲ. ಇದರ ಬಗ್ಗೆ ಪರಮೇಶ್ವರಯ್ಯನವರಿಗೆ ಕೃತಜ್ಞತೆ ಇದೆ. ಅಂತರ್ಮುಖಿ ಎಂಬಂತಿರುವ ಪರಮೇಶ್ವರಯ್ಯನವರು ತಮ್ಮ ಪಾಡಿಗೆ ತಾವು ಇರುವಂಥವರು. ಸಹೋದ್ಯೋಗಿಗಳೊಂದಿಗೆ ಮಾತುಕತೆಯಲ್ಲಿ ತೊಡಗುವುದು ಒಂದೋ ಊಟ ಅಥವಾ ಚಹಾ ವಿರಾಮದಲ್ಲಿ, ಇಲ್ಲವೇ ಎಲ್ಲಾ ಶಿಕ್ಷಕರೂ ಸೇರುವ ಸಭೆಗಳಲ್ಲಿ.

ತಮ್ಮ ತರಗತಿ, ವಿದ್ಯಾರ್ಥಿಗಳು ಮತ್ತು ಕಲಿಕೆ ಇವು ಅಷ್ಟೇ ಪರಮೇಶ್ವರಯ್ಯನವರ ಗಮನದಲ್ಲಿ ಇರುವಂತಹದು. ಅವರಿಗೆ ಸಮೂಹ ಸಂಪನ್ಮೂಲ ವ್ಯಕ್ತಿ (ಕ್ಲಸ್ಟರ್ ರಿಸೋರ್ಸ್ ಪರ್ಸನ್ – ಸಿಆರ್‌ಪಿ), ಬಿಆರ್‌ಪಿ (ಬ್ಲಾಕ್ ರಿಸೋರ್ಸ್ ಪರ್ಸನ್) ಮೊದಲಾದ ಶೈಕ್ಷಣಿಕ ಬೆಂಬಲ ನೀಡುವ ಪಾತ್ರಗಳನ್ನು ವಹಿಸಿಕೊಳ್ಳುವುದರಲ್ಲಿ ಆಸಕ್ತಿ ಇಲ್ಲ. ವಿದ್ಯಾರ್ಥಿಗಳೊಂದಿಗೆ ತಮ್ಮ ತರಗತಿಯಲ್ಲೇ ಇರುವುದರಲ್ಲಿ ಸಂಪೂರ್ಣ ತೃಪ್ತಿ ಇದೆ. ಅವರಿಗಿರುವ ಒಂದೇ ಒಂದು ವಿಷಾದವೆಂದರೆ, ಅವರ ವಿದ್ಯಾರ್ಥಿಗಳು 4ನೇ ತರಗತಿಯಿಂದ ಐದನೆಯ ತರಗತಿಗೆ ಹೋದಾಗ ಪರಮೇಶ್ವರಯ್ಯನವರ ಬೋಧನಾ ವಿಧಾನಗಳಿಂದ ವಂಚಿತಾಗುತ್ತಾರೆ ಎಂಬುದು. ಕೇರಳದಲ್ಲಿನ ಒಂದು ಮಾದರಿ ಶಾಲೆಯನ್ನು ನೋಡಿದ ಮೇಲೆ ತನ್ನ ಮನಸ್ಸು ತರಗತಿಯಲ್ಲಿನ ಅಪಾರ ಸಾಧ್ಯತೆಗಳ ಬಗ್ಗೆ ತೆರೆದುಕೊಂಡಿತು ಎಂದು ತನ್ನದೇ ಉದಾಹರಣೆಯನ್ನು ಮುಂದಿಟ್ಟರು. ತಾನೊಬ್ಬ ಅತ್ಯುತ್ತಮ ಶಿಕ್ಷಕನಾಗಬೇಕೆಂಬ ಅತೀವ ಹಂಬಲ ಅವರಿಗಿದೆ. ಆದರೆ ಅವರು ಯಾರಿಂದಲೂ ಗುಣಗಾನವನ್ನು ನಿರೀಕ್ಷೆ ಮಾಡುವುದಿಲ್ಲ; ಸಹೋದ್ಯೋಗಿಗಳ ಅಥವಾ ಮೇಲ್ವಿಚಾರಕ ಅಧಿಕಾರಿಗಳ ಮೆಚ್ಚುಗೆಯನ್ನೂ ಬಯಸುವುದಿಲ್ಲ.

ಬಾಲಸ್ನೇಹಿ ಶಾಲಾ ಉಪಕ್ರಮ (ಚೈಲ್ಡ್ ಫ್ರೆಂಡ್ಲಿ ಸ್ಕೂಲ್ ಇನಿಶಿಯೇಟಿವ್ – ಸಿಎಫ್‌ಎಸ್‌ಐ)ದ ತರಬೇತಿ ಕಾರ್ಯಕ್ರಮಗಳ ವರ್ಕ್‌ಶೀಟ್‌ಗಳು, ವೈಯಕ್ತಿಕ ರೀಡಿಂಗ್

ಬೋರ್ಡ್‌ಗಳು ಹಾಗೂ ಇತರೇ ಸಾಮಗ್ರಿಗಳು ತಮ್ಮ ತರಗತಿಯಲ್ಲಿ ತುಂಬಾ ಉಪಯುಕ್ತವಾದವು, ತಮ್ಮ ಬೋಧನಾ ಶೈಲಿಯ ಮೇಲೆ ಪರಿಣಾಮ ಬೀರಿದವು ಎಂದು ತಾವು ಬ್ಲಾಕ್ ಸಂಪನ್ಮೂಲ ವ್ಯಕ್ತಿ ಆಗಿದ್ದಾಗ, ಸಿಎಫ್‌ಎಸ್‌ಐನ ಒಡನಾಟದಲ್ಲಿದ್ದ ಪರಮೇಶ್ವರಯ್ಯನವರು ಹೇಳುತ್ತಾರೆ. ಪರಮೇಶ್ವರಯ್ಯನವರನ್ನು 'ನಲಿ–ಕಲಿ' ತರಬೇತಿದಾರರಾಗಿ ಆಯ್ಕೆಮಾಡಲಾಗಿತ್ತು. ಅವರು 'ನಲಿ–ಕಲಿ' ತರಬೇತಿ ಮಾಡ್ಯೂಲ್‌ಗಳನ್ನು ತಯಾರಿಸುವ ತಂಡದ ಸದಸ್ಯರೂ ಆಗಿದ್ದರು. ಸುರಪುರ ತಾಲೂಕಿನ ಶಿಕ್ಷಕರ ಕಲಿಕಾ ಕೇಂದ್ರ (ಟೀಚರ್ ಲರ್ನಿಂಗ್ ಸೆಂಟರ್ – ಟಿಎಲ್‌ಸಿ) ವನ್ನು ಸ್ಥಾಪಿಸಿದಾಗ, ಎಲ್ಲಾ ಲಭ್ಯ ಸಾಮಗ್ರಿಯಿಂದಲೂ ಕಲಿಯಲು ಉತ್ಸುಕರಾದ ಪರಮೇಶ್ವರಯ್ಯನವರು ಅಲ್ಲಿಗೆ ಪದೇಪದೇ ಭೇಟಿ ನೀಡಿ ಭಾಗೀದಾರರಾದರು. ಅವರು ಸ್ವಯಂ ಪ್ರೇರಣೆಯ ಶಿಕ್ಷಕರ ವೇದಿಕೆ (ವಾಲಂಟರಿ ಟೀಚರ್ ಫೋರಮ್ –ವಿಟಿಎಫ್)ಯಲ್ಲೂ ಭಾಗವಹಿಸುತ್ತಿದ್ದು, ಅಲ್ಲಿ ನಡೆಯುವ ಚರ್ಚೆಗಳಿಗೆ ನೀಡುವ ಕೊಡುಗೆಗಳನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ಫೌಂಡೇಶನ್‌ನಿಂದ ಎಚ್‌ಡಿ ಕೋಟೆಯಲ್ಲಿ ನಡೆದ ಸಮಾಜ ವಿಜ್ಞಾನ ಬೇಸಿಗೆ ಶಿಬಿರವು ವಿಷಯದ ಬಗ್ಗೆ ಆಳವಾದ ತಿಳಿವಳಿಕೆಯನ್ನು ಪಡೆದುಕೊಳ್ಳಲು ತಮಗೆ ನೆರವಾಯಿತು ಎಂದು ಹೇಳುತ್ತಾರೆ. ನಾವು ಚರಿತ್ರೆಯನ್ನು ಏಕೆ ಮತ್ತು ಹೇಗೆ ಕಲಿಸಬೇಕು ಎಂಬುದಕ್ಕೆ ತಮ್ಮ ಉತ್ತರವನ್ನು ಅವರು ಬಹಳ ಸುಂದರವಾಗಿ ಅಭಿವ್ಯಕ್ತಿಸಿದ್ದು ಹೀಗೆ, "ಈ ವಿಷಯದಲ್ಲಿ ಮಾಹಿತಿಯನ್ನು ನೆನಪಿಟ್ಟುಕೊಳ್ಳುವುದಕ್ಕಿಂತ ಸಾಕ್ಷಿ–ಪುರಾವೆಯನ್ನು ಹುಡುಕುವುದು, ಪ್ರಶ್ನೆ ಕೇಳಿಕೊಳ್ಳುವುದು ಮುಖ್ಯ ಎಂಬುದನ್ನು ನಾವು ಮಕ್ಕಳಿಗೆ ತಿಳಿಸಬೇಕು. ಆದ್ದರಿಂದಲೇ ನಾನು ಐತಿಹಾಸಿಕ ಘಟನೆಗಳನ್ನು ಚರ್ಚಿಸುವಾಗ ವಿಚಾರ, ತರ್ಕ, ಆಸಕ್ತಿದಾಯಕ ಸಂಬಂಧಿತ ವಿಷಯಗಳು ಇವೆಲ್ಲವನ್ನೂ ತರುತ್ತೇನೆ. ನಾನು ಇದನ್ನು ಅನುಷ್ಠಾನಕ್ಕೆ ತಂದಾಗ ಮಕ್ಕಳ ನೆನಪಿನ ಶಕ್ತಿ ಬೆಳೆಯುತ್ತದೆ ಎಂಬುದನ್ನು ಕಂಡುಕೊಂಡಿದ್ದೇನೆ."

ಪರಮೇಶ್ವರಯ್ಯನವರ ಆಸಕ್ತಿ ಸಂಪೂರ್ಣವಾಗಿ ತರಗತಿಗಳು ಹಾಗೂ ವಿದ್ಯಾರ್ಥಿಗಳು ಎಂಬುದು ನಿಜವಾದರೂ ಅವರು ತಮ್ಮನ್ನು ಇಷ್ಟಕ್ಕೇ ಮಿತಿಗೊಳಿಸಿಕೊಂಡಿದ್ದಾರೆ ಎಂದೇನೂ ಅಲ್ಲ. 2013ರಲ್ಲಿ ಯಾಳಗಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಸೇರಿದಾಗ ಅವರು ಎಲ್ಲ ತರಗತಿಗಳಲ್ಲೂ ಮಕ್ಕಳ ಕಲಿಕಾ ಸಾಮರ್ಥ್ಯ ಕೆಳಮಟ್ಟದಲ್ಲಿರುವುದನ್ನು ಗಮನಿಸಿ ಮೊದಲು ಅದನ್ನು ಮೇಲಕ್ಕೆತ್ತಬೇಕು ಎಂದು ನಿರ್ಧರಿಸಿದರು. 5, 6, 7ನೇ ತರಗತಿಗಳಿಗೆ ಸೇರಿದ ಸುಮಾರು ನಲವತ್ತೈದು ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದೆ ಬಿದ್ದಿರುವುದನ್ನು ಗುರುತಿಸಿ ಅವರಿಗೆ ವಿಶೇಷ ತರಗತಿಗಳನ್ನು ಆರಂಭಿಸಿದರು. ಈ ಮಕ್ಕಳಿಗೆ ಓದುವುದು, ಬರೆಯುವುದು, ಗ್ರಹಣಶಕ್ತಿ ಹಾಗೂ ಗಣಿತದಲ್ಲಿ ನೆರವಾಗಬೇಕು ಎಂಬ ವೈಯಕ್ತಿಕ ಬದ್ಧತೆ ಅವರನ್ನು ಅದಕ್ಕೆ ಪ್ರೇರೇಪಿಸಿತ್ತು. ಕೇವಲ ಆರು ತಿಂಗಳಲ್ಲಿ ಇವರೆಲ್ಲರೂ ಗಮನಾರ್ಹವಾಗಿ ಪ್ರಗತಿಯನ್ನು ಸಾಧಿಸಿದರು. ಪ್ರತಿ ಮಗುವೂ ಕಲಿಯುವ ಸಾಮರ್ಥ್ಯವನ್ನು ಹೊಂದಿದೆ ಎಂದು ನಿರೂಪಿಸಿದರು. "ನಾವು ಶಿಕ್ಷಕರು ಹೆಚ್ಚು ಪ್ರಯತ್ನಶೀಲರಾಗಲು, ತುಂಬಾ ಹೆಚ್ಚು ಪ್ರಯತ್ನಿಸಲು ಸಿದ್ಧರಿದ್ದರೆ ಮಕ್ಕಳು ಕಲಿಯುತ್ತಾರೆ" ಎಂದು ಪರಮೇಶ್ವರಯ್ಯ ಹೇಳುತ್ತಾರೆ. ಆ ನಲವತ್ತೈದು ಮಕ್ಕಳಿಗೆ ವೇಗವಾಗಿ ಕಲಿಯುವ ಕಾರ್ಯಕ್ರಮ ರೂಪಿಸಲು ತಮಗೆ

ಫೌಂಡೇಶನ್‌ನ ಕಾರ್ಯಕ್ರಮಗಳಿಂದ ಕಲಿತದ್ದು ಸಹಾಯಕವಾಯಿತು ಎಂದು ಸ್ಮರಿಸುತ್ತಾರೆ. ಮಕ್ಕಳಿಗೆ ತಾವು ಕಲಿಯುತ್ತಿದ್ದೇವೆ ಎಂಬುದು ತಿಳಿಯತೊಡಗುತ್ತದೆ; ತರಗತಿಯಲ್ಲಿ ಆಸಕ್ತಿ ಬೆಳೆಯುತ್ತದೆ; ಶಾಲೆಗೆ ತಪ್ಪದೆ ಬರಲು ಆರಂಭಿಸುತ್ತಾರೆ, ಈಗ ಪ್ರತಿವರ್ಷವೂ ಹಾಜರಾಗುತ್ತಿದ್ದಾರೆ. ಕರ್ನಾಟಕ ಸ್ಟೇಟ್ ಕ್ವಾಲಿಟಿ ಅಸೆಸ್ಮೆಂಟ್ ಅಂಡ್ ಅಕ್ರೆಡಿಟೇಷನ್ ಕೌನ್ಸಿಲ್ (ಕೆಎಸ್‌ಕ್ಯೂಎಎಸಿ) ಮೌಲ್ಯಮಾಪನದಲ್ಲಿ ತಮ್ಮ ಶಾಲೆಯ ಹೆಸರು ಉನ್ನತ ಶ್ರೇಣಿಯ ಶಾಲೆಗಳ ಪಟ್ಟಿಯಲ್ಲಿರುತ್ತದೆ ಎಂಬ ವಿಶ್ವಾಸ ಪರಮೇಶ್ವರಯ್ಯ ಅವರಿಗಿದೆ. ಇಷ್ಟಾಗಿಯೂ ಆರೆಂಟು ಮಕ್ಕಳು ಇನ್ನೂ ಚೆನ್ನಾಗಿ ಕಲಿಯುತ್ತಿಲ್ಲ ಎಂಬ ನೋವೂ ಸಹ ಅವರನ್ನು ಕಾಡುತ್ತದೆ. ಈ ಮಕ್ಕಳ ಬಗ್ಗೆ ಅವರಿಗೆ ಕಾಳಜಿ ಇದೆ.

ಪರಮೇಶ್ವರಯ್ಯನವರು ತಮ್ಮ ಪಾಠಗಳನ್ನು ಚೆನ್ನಾಗಿ ಸಂಘಟಿಸಿಕೊಳ್ಳುತ್ತಾರೆ. ಮಕ್ಕಳು ಸದಾಕಾಲ ಒಂದಲ್ಲ ಒಂದು ಚಟುವಟಿಕೆಯಲ್ಲಿ ಇರುವಂತೆ ನೋಡಿಕೊಳ್ಳುತ್ತಾರೆ. "ಇಲ್ಲದಿದ್ದರೆ ಸಮಸ್ಯೆಗಳು ಸೃಷ್ಟಿಯಾಗುತ್ತವೆ" ಎನ್ನುತ್ತಾರವರು. ಅವರ ತರಗತಿಗೆ ಒಂದು ಸುಸಂಘಟಿತ ವೇಳಾಪಟ್ಟಿಯಿದ್ದು ಅದರಲ್ಲಿ ಬೆಳಗಿನ ಪ್ರಾರ್ಥನಾ ಸಭೆ, ಪದ್ಯ ಹೇಳುವುದು, ಕಥೆ ಹೇಳುವುದು, ಹಿಂದಿನ ದಿನ ಕಲಿತದ್ದನ್ನು ಚಿಕ್ಕದಾಗಿ ಮೆಲುಕು ಹಾಕುವುದು ಎಲ್ಲವೂ ಇರುತ್ತವೆ. ಅವರು ತುಂಬಾ ಸಹಜವಾಗಿ ಹಾಗೂ ಯುಕ್ತಿಯಿಂದ ಮೌಲ್ಯಗಳನ್ನು ಒಳಗೊಂಡ ಒಂದಲ್ಲ ಒಂದು ಚರ್ಚೆಯನ್ನು ಆರಂಭಿಸುತ್ತಾರೆ. ಪ್ರಾರ್ಥನಾ ಸಭೆಯನ್ನು ನಡೆಸಿಕೊಂಡು ಹೋಗಲು ಅವರೊಂದು 'ತರಗತಿ ಸಂಪುಟ' (ನಾಯಕರ ತಂಡ)ವನ್ನು ರಚಿಸಿದ್ದಾರೆ. ಪ್ರತಿಯೊಂದು ದಿನವೂ ಬೇರೆಬೇರೆ ನಾಯಕರು 'ಚಿಂತನ' ಎಂಬ, ಮೌಲ್ಯಗಳ ಕುರಿತಾದ ಚರ್ಚೆಯನ್ನು ನಡೆಸಿಕೊಡುತ್ತಾರೆ. ಹಾಗೆಯೇ ಗಣಿತ ಮತ್ತು ಕನ್ನಡ ಗುಂಪುಗಳನ್ನು ರಚಿಸಿದ್ದಾರೆ. ಈ ಗುಂಪುಗಳು ಒಂದು ವಾರ ಬಿಟ್ಟು ಇನ್ನೊಂದು ವಾರದ ಬುಧವಾರದಂದು ಸೇರಿ ಮಿತ್ರರಿಂದ ಕಲಿಯುವುದು, ಪರಸ್ಪರ ಸಹಕಾರ ಪಡೆಯುವುದನ್ನು ಉತ್ತೇಜಿಸುತ್ತವೆ. ಈ ಸ್ನೇಹಿತ ಸಹಾಯಕರನ್ನು ವಿವಿಧ ಜಾತಿಗಳಿಂದ ಆರಿಸಿ, ವಾಸ್ತವದಲ್ಲಿ ಸಮಾನತೆಯ ಭಾವವು ಅವರ ನಡುವೆ ನೆಲೆಗೊಳ್ಳುವಂತೆ ಮಾಡಲಾಗಿದೆ.

ಪರಮೇಶ್ವರಯ್ಯನವರ ವೇಳಾಪಟ್ಟಿಯಲ್ಲಿ ಹತ್ತಿರದ ಸ್ಥಳಗಳಿಗೆ ಸಂಚಾರ ಹೋಗುವುದಕ್ಕೆ ಅವಕಾಶವಿದೆ. ಈ ಕಾರ್ಯಕ್ರಮದ ಮೂಲಕ ತರಗತಿಯಲ್ಲಿ ಕಲಿತದ್ದನ್ನು ಮಕ್ಕಳು ಹೊರಜಗತ್ತಿನೊಂದಿಗೆ ತಾಳೆ ನೋಡಲು ಸಹಾಯವಾಗುತ್ತದೆ. ಪ್ರಾಯೋಗಿಕ ಜ್ಞಾನವನ್ನು ಪಡೆಯಲು ಮಕ್ಕಳು ಸರಳವಾದ, ಸ್ಥಳೀಯವಾದ ಸಮೀಕ್ಷೆಗಳನ್ನು ಪ್ರಸ್ತುತ ವಿಷಯಗಳ ಮೇಲೆ ನಡೆಸುತ್ತಾರೆ. ತಮ್ಮ ಸಣ್ಣಪುಟ್ಟ ಉಳಿತಾಯಗಳಿಂದ ತಮ್ಮದೇ ಆದ ಬ್ಯಾಂಕ್ ಅನ್ನು ರಚಿಸಿಕೊಳ್ಳಲು ನೆರವಾಗಿದ್ದಾರೆ. ಮಕ್ಕಳು ಪುಸ್ತಕ ಮೊದಲಾದ ಸಾಮಗ್ರಿಗಳನ್ನು ಕೊಳ್ಳಲು ಆ ಬ್ಯಾಂಕ್‌ನಿಂದ ಸಾಲ ಪಡೆದು ನಂತರ ತಮಗೆ ಸಾಧ್ಯವಾದಾಗ ಆ ಹಣವನ್ನು ವಾಪಸ್ ಮಾಡುತ್ತಾರೆ. ಸ್ವತಃ ಪರಮೇಶ್ವರಯ್ಯನವರೇ ಪ್ರತಿ ತಿಂಗಳು ಆ ಬ್ಯಾಂಕ್‌ಗೆ ತಮ್ಮ ಕಡೆಯಿಂದ 200 ರೂ. ಕೊಡುತ್ತಾರೆ.

ಪ್ರತಿವರ್ಷ ಜೂನ್, ಜುಲೈ ತಿಂಗಳುಗಳಲ್ಲಿ ಹೊಸ ಶೈಕ್ಷಣಿಕ ವರ್ಷ ಆರಂಭವಾಗುತ್ತದೆ. ಆಗ ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕೆಯ ಮಟ್ಟ ಹೇಗಿದೆ ಎಂಬುದನ್ನು ನಿರ್ಧಾರ ಮಾಡಲಾಗುತ್ತದೆ. ಆ ತರಗತಿಯ ಪಠ್ಯಕ್ರಮವನ್ನು ಅವರು ನಿಜಕ್ಕೂ ಅರಗಿಸಿಕೊಳ್ಳಲು

ಸಾಧ್ಯವಾಗುವಂತೆ, ಪ್ರತಿಯೊಬ್ಬ ವಿದ್ಯಾರ್ಥಿಗೂ ಆವಶ್ಯಕ ಬೆಂಬಲವನ್ನು ನೀಡಲಾಗುತ್ತದೆ. ಹೀಗಾಗಿ ಪರಮೇಶ್ವರಯ್ಯನವರು ವಾಸ್ತವದಲ್ಲಿ ಆ ತರಗತಿಯ ನಿಗದಿತ ಪಠ್ಯವನ್ನು ಆರಂಭಿಸುವುದು ಆಗಸ್ಟ್ ತಿಂಗಳಿನಲ್ಲಿಯೇ. ಮೊದಲ ಎರಡು ತಿಂಗಳಿನಲ್ಲಿ ಅವರು ಹಾಕುವ ಅಡಿಪಾಯವು ನಿರ್ಣಾಯಕವಾದದ್ದು. ಅವರು ಪ್ರತಿಯೊಂದು ಮಗುವಿನ ಕಲಿಕೆಯ ಪ್ರಗತಿಯ ದಾಖಲೆಯನ್ನು ಇರಿಸಿದ್ದಾರೆ; ಅದು ಅವರ ಬೋಧನಾಕ್ರಮದ ಒಂದು ವೈಶಿಷ್ಟ್ಯ.

ಪ್ರತಿಯೊಂದು ಮಗುವೂ ಒಂದು ಪರಿಕಲ್ಪನೆಯನ್ನು ಗ್ರಹಿಸಲು ಸಾಧ್ಯವಾಗುವಂತೆ ತರ್ಕ ಮತ್ತು ವಿಶ್ಲೇಷಣೆಯನ್ನು ಪರಮೇಶ್ವರಯ್ಯ ಜಾಣ್ಮೆಯಿಂದ ಉಪಯೋಗಿಸುತ್ತಾರೆ. ಗಣಿತದಲ್ಲಿ ಮಕ್ಕಳು ಮಾಡಿರುವ ಕೆಲಸವನ್ನು ಗಮನಿಸಿದಾಗ ಇದು ಮನವರಿಕೆ ಯಾಗುತ್ತದೆ. ಕೋಷ್ಟಕಗಳು, ಗ್ರಾಫ್‌ಗಳು, ಪೈ ಚಾರ್ಟ್‌ಗಳು ಮುಂತಾದ ಕಲಿಕಾ ಸಾಮಗ್ರಿಗಳನ್ನು ತಯಾರಿಸಲು ಮಕ್ಕಳಿಗೆ ಕೆಲಸವನ್ನು ನೀಡುವಾಗ, ಅದರ ಹಿಂದೆ ಪರಿಕಲ್ಪನೆಗಳನ್ನು ಅಳವಡಿಸುವುದಕ್ಕೆ ಪ್ರಾಮುಖ್ಯತೆಯನ್ನು ನೀಡಿರುವುದು ವೇದ್ಯವಾಗುತ್ತದೆ. ಬಹುತೇಕ ಎಲ್ಲ ಮಕ್ಕಳ ಫಲಿತಾಂಶ ದಾಖಲೆಗಳೂ ಚೆನ್ನಾಗಿಯೇ ಇವೆ. ಆದರೆ ಇದನ್ನು ಅವರು ನಮಗೆ ತೋರಿಸುವಾಗ ನಮಗೆ ಗೋಚರಿಸಿದ್ದು 'ಶಿಕ್ಷಕನೊಬ್ಬ ಮಾಡಬೇಕಾದ ಕರ್ತವ್ಯವನ್ನಷ್ಟೇ ನಾನು ಮಾಡಿದ್ದೇನೆ' ಎಂಬಂತಹ ವಿನಯಶೀಲತೆ.

ಪರಮೇಶ್ವರಯ್ಯನವರಿಗೆ ಇನ್ನೂ ಒಂದು ಕರ್ತವ್ಯವಿದೆ. ನವೋದಯ ಮತ್ತು ಮೊರಾರ್ಜಿ ಶಾಲೆಯಲ್ಲಿ ಪ್ರವೇಶ ಪಡೆಯಲು ಆಸೆಯಿದ್ದು, ಅದಕ್ಕೆ ಅಗತ್ಯ ಸಾಮರ್ಥ್ಯವೂ ಇರುವಂಥ ವಿದ್ಯಾರ್ಥಿಗಳನ್ನು ಹುಡುಕಿ ಅವರಿಗೆ ಅಗತ್ಯವಾದ ತರಬೇತಿಯನ್ನು ಅವರು ಕೊಡುತ್ತಾರೆ. ಈ ಕೆಲಸಕ್ಕೆ ಇನ್ನೊಬ್ಬ ಸಹೋದ್ಯೋಗಿಯನ್ನೂ ಹುಡುಕಿಕೊಂಡಿದ್ದಾರೆ. ಇಬ್ಬರೂ ಸೇರಿ 5ನೆಯ ತರಗತಿಯ ಮಕ್ಕಳಿಗೆ ಎರಡು ತಾಸುಗಳ ವಿಶೇಷ ತರಗತಿಯನ್ನು ನಡೆಸುತ್ತಾರೆ. ಕಳೆದ ಮೂರು ವರ್ಷಗಳ ಕಾಲ ಸತತವಾಗಿ ಪ್ರತಿವರ್ಷ ಮೂವರು ವಿದ್ಯಾರ್ಥಿಗಳು ಮೊರಾರ್ಜಿ ಶಾಲೆಗೆ ಪ್ರವೇಶ ಪಡೆದಿದ್ದು ಇಬ್ಬರು ಅಥವಾ ಮೂರು ಜನ ಪ್ರತಿಭಾವಂತ ವಿದ್ಯಾರ್ಥಿಗಳು ನವೋದಯ ಶಾಲೆಗೂ ಸೇರಿದ್ದಾರೆ. ಸಹೋದ್ಯೋಗಿಗಳಿಗೆ ಪರಮೇಶ್ವರಯ್ಯನವರ ಬಗ್ಗೆ ತುಂಬಾ ಮೆಚ್ಚುಗೆ ಇದೆ. ತಮ್ಮ ವಿದ್ಯಾರ್ಥಿಗಳ ಕಲಿಕೆಯ ಕುರಿತಾಗಿ ಅವರಿಗಿರುವ ಬದ್ಧತೆ ಮತ್ತು ಕಾಳಜಿ ಮಾತ್ರವಲ್ಲದೆ ಹಲವು ರೀತಿಯ ಬೋಧನಾ ಕ್ರಮಗಳನ್ನೂ, ಶೈಕ್ಷಣಿಕ ನಾವೀನ್ಯತೆಯನ್ನೂ ಪ್ರಯತ್ನಿಸುವ ಅವರ ಉತ್ಸಾಹ ಹಾಗೂ ಲವಲವಿಕೆಯನ್ನು ಸಹೋದ್ಯೋಗಿಗಳು ಮೆಚ್ಚಿಕೊಳ್ಳುತ್ತಾರೆ. ಅಲ್ಲದೆ ಅವರ ಜೊತೆ ಮಕ್ಕಳ ಕಲಿಕೆ, ಶೈಕ್ಷಣಿಕ ವಿಷಯಗಳು, ಬೋಧನಾ ವಿಧಾನಗಳ ಬಗ್ಗೆ ಮಾತನಾಡಬಹುದೇ ಹೊರತು ಕಾಡುಹರಟೆ ಸಾಧ್ಯವಿಲ್ಲ ಎಂಬುದನ್ನೂ ಅವರು ಬಲ್ಲರು.

ನಾವು ಅಲ್ಲಿಂದ ಹೊರಡುವಾಗ ಒಂದು ಸಂಕ್ಷಿಪ್ತ ವಿದಾಯವನ್ನು ಹೆಚ್ಚಿನ ಔಪಚಾರಿಕತೆ ಇಲ್ಲದೆ ಹೇಳಿ ಹೊರಟೆವು. ನಾವು ಬಾಗಿಲ ಕಡೆ ಹೊರಳುವಷ್ಟರಲ್ಲಿ, ಪರಮೇಶ್ವರಯ್ಯ ತಮ್ಮ ಕಡತಗಳಲ್ಲಿ ಮುಳುಗಿಹೋಗಿದ್ದರು. ಅವರು ಮತ್ತೆ ಕತ್ತೆತ್ತಿ ನೋಡಲಿಲ್ಲ.